<u>ಸಿ.ಡಬ್ಲೂ.-09 / ಪಿ.ಡಬ್ಲೂ-05</u>

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 81/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಚನ್ನೇಗೌಡ |
| ತಂದೆಯ ಹೆಸರು | : | ಚನ್ನಯ್ಯ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕಃ 19.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳನ್ನು ನಾನು ನೋಡಿರುವುದಿಲ್ಲ. ನಾನು ಯಾವುದಲೇ ಘಟನೆಯನ್ನು ನೋಡಿರುವುದಿಲ್ಲ. ನಾನು ಚಾಸಾ-1 ರವರಿಗೆ ವಿಶೇಷ ಮುಖ್ತ್ಯಾರ್ ನಾಮೆ ಕೊಟ್ಟಿರುತ್ತೇನೆ. ಅದರಂತೆ ಅವರು ನಮ್ಮ ಜಮೀನಿನಲ್ಲಿ ವ್ಯವಸಾಯ ಮಾಡಿಸುತ್ತಿದ್ದಾರೆ. ಚಾಸಾ-1 ರವರು ಗಲಾಟೆ ಬಗ್ಗೆ ನನಗೆ ತಿಳಿಸಿರುತ್ತಾರೆ. ಚಾಸಾ-1 ರವರು ನನಗೆ ಹೇಳಿರುವುದೇನೆಂದರೆ ದಿನಾಂಕಃ 19.06.2020 ರಂದು ಬೆಳಿಗ್ಗೆ ಸುಮಾರು 10.30-10.45 ಗಂಟೆ ಸಮಯದಲ್ಲಿ ಆರೋಪಿಗಳು ನಮ್ಮ ಜಮೀನಿನಲ್ಲಿರುವ ಬಂಡಿ ದಾರಿಗೆ ಬಂದು ಚಾಸಾ-1 ರವರನ್ನು ಕರೆದು ಇದು ನಮ್ಮ ಜಮೀನು, ಇಲ್ಲಿ ಕೆಲಸ ಮಾಡಬೇಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಹೇಳಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ರಿಂದ ಚಾಸಾ-7 ಇದ್ದರು ಎಂದು ಹೇಳಿರುತ್ತಾರೆ. ನಂತರ ಚಾಸಾ-1 ರವರಿಗೆ ದೂರು ಕೊಡಿ ಎಂದು ಹೇಳಿರುತ್ತೇನೆ. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕಃ 19.06.2020 ರಂದು ಗಲಾಟೆ ನಡೆದಾಗ ಆರೋಪಿಗಳು ನಮ್ಮ ಜಮೀನಿಗೆ ಆಕ್ರಮ ಪ್ರವೇಶ ಮಾಡಿ ಚಾಸಾ-1 ರಿಂದ ಚಾಸಾ-3 ರವರನ್ನು ಆಕ್ರಮವಾಗಿ ಅಡ್ಡಗಟ್ಟಿರುತ್ತಾರೆಂದು ಚಾಸಾ-1 ನನಗೆ ಹೇಳಿರುತ್ತಾರೆಂದರೆ ಆರೋಪಿಗಳು ನಮ್ಮ ಜಮೀನಿನಲ್ಲಿರುವ ಬಂಡಿ ದಾರಿಗೆ ಬಂದು ಚಾಸಾ-1 ರಿಂದ ಚಾಸಾ-3 ಮತ್ತು ಚಾಸಾ-7 ರವನ್ನು ಕರೆದು ಇದು ನಮ್ಮ ಜಮೀನು, ಇಲ್ಲಿ ಬಂದರೆ ಕೊಲೆ ಮಾಡುತ್ತೇವೆಂದು ಹೇಳಿರುತ್ತಾರೆಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಡಿ.ಆರ್.ಎಂ. ವಕೀಲರಿಂದಃ**

ನಾನು ಚಾಸಾ-1 ರವರಿಗೆ ನೋಂದಾಯಿತವಲ್ಲದ ಮುಖ್ತ್ಯಾರ್ ನಾಮೆ ಬರೆದುಕೊಟ್ಟಿರುತ್ತೇನೆ. ಆರೋಪಿಗಳು ಯಾವತ್ತೂ ಕೂಡ ನಮ್ಮ ಜಮೀನಿಗೆ ಬಂದಿಲ್ಲವೆಂದರೆ ಸರಿಯಲ್ಲ. ಆರೋಪಿಗಳು ವ್ಯವಸಾಯ ಮಾಡುತ್ತಿರುವ ಜಮೀನಿಗೆ ಚಾಸಾ-1 ರಿಂದ ಚಾಸಾ-3 ಬಂದು ತೊಂದರೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದಿದ್ದರು ಆರೋಪಿಗಳನ್ನು ಹೆದರಿಸುವ ಉದ್ದೇಶದಿಂದ ಸುಳ್ಳು ದೂರು ನೀಡಿ ನನಗೆ ಸುಳ್ಳು ಮಾಹಿತಿ ನೀಡಿರುತ್ತಾರೆಂದರೆ ಸರಿಯಲ್ಲ. ನಾನು ಹೇಳಿರುವಂತೆ ಯಾವುದೇ ಗಲಾಟೆ ನಡೆದಿಲ್ಲ ಮತ್ತು ಚಾಸಾ-1 ರಿಂದ ಚಾಸಾ-3 ರವರಿಗಾಗಲೀ ಸದರಿ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ಚಾಸಾ-1 ರಿಂದ ಚಾಸಾ-3 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**